


‘ಇಪ್ಪತ್ತು ನೇಗಿಲಿದ್ದವ ಶ್ರೀಮಂತ’ ಎನ್ನುವ ಕಾಲವೊಂದಿತ್ತು. ಈಗ?




ಊರು ಕೇರಿಗಳ ಕಥನಗಳಿಗೆ ಮೌನ ಸಾಕ್ಷಿಯಂತೆ ಉಳಿದಿರುವ ಬಡಗಣಿ ಹೊಳೆ

ಡಾ. ಫ್ರಾನ್ಸಿಸ್ ಬುಕಾನನ್ ಇಲ್ಲಿಗೆ ಬಂದಿದ್ದಾಗ ಇದನ್ನು ಬರೆದಿದ್ದಾರೆ. ‘ಇಲ್ಲಿ 20 ನೇಗಿಲಿದ್ದವರು ಶ್ರೀಮಂತರು. ಅಂದರೆ 40 ಎತ್ತು 60 ಆಳುಗಳನ್ನು ಸಾಕಬಲ್ಲ ರೈತರು ಇವರು’ ಎಂದು ಗುರುತಿಸಿದ್ದರು. ವಿಶೇಷವೆಂದರೆ 200 ವರ್ಷಗಳ ಹಿಂದೆ ಇಲ್ಲಿ ಎತ್ತಿನ ಗಾಡಿಯೂ ಇರಲಿಲ್ಲ. ಹಳ್ಳಕೊಳ್ಳ ತಗ್ಗು ದಿನ್ನೆಗಳಿರುವ ಕಾರಣ ಕರಾವಳಿಯಲ್ಲಿ ಚಕ್ಕಡಿ ಓಡಾಟದ ಮಾರ್ಗ ರೂಪುಗೊಂಡಿರಲಿಲ್ಲ. ತಲೆಹೊರೆ, ಹೇರೆತ್ತು, ಕುದುರೆಗಳ ಮೇಲೆ ಸರಕು ಸಾಗಾಟವಿತ್ತು. ಕ್ರಿ.ಶ. 1826ರ ತರುವಾಯ ಈ ಊರಿಗೆ ಎತ್ತಿನ ಗಾಡಿಗಳು ಬಂದವು.

ಹಳ್ಳಿಯ ಹಳೆಯ ಕಥೆಗಳನ್ನು ಶಾಸನ, ಪ್ರವಾಸಿಗರ ವರದಿ, ಭೂಕಂದಾಯದ ಕಡತ, ಐತಿಹ್ಯ, ಜನಪದ ಜೀವನದ ಪುಟ ತೆಗೆದು ಹುಡುಕಬಹುದು. ಬಡಗಣಿಯ ಗದ್ದೆ ಬಯಲಿನ ಮರಳು ಬಗೆಯುತ್ತ ಇಪ್ಪತ್ತು ಮೂವತ್ತು ಅಡಿ ಆಳಕ್ಕೆ ಇಳಿದರೆ ಕಪ್ಪೆಚಿಪ್ಪಿನ ಕವಚಗಳ ಪದರ ಸಿಗುತ್ತವೆ. ಸಮುದ್ರಜೀವಿ ಈ ಮೃದ್ವಂಗಿಯ ಸುಣ್ಣದ ಕವಚ ಯಾವಾಗ ಬಂತೆಂದು ಕಾರ್ಬನ್ ಡೇಟಿಂಗ್ ಪರೀಕ್ಷೆ ಮಾಡಬಹುದು. ಸುಮಾರು 4500–5000 ವರ್ಷಗಳ ಹಿಂದೆ ಈ ಪ್ರದೇಶ ಕಡಲಾಗಿದ್ದ ಕಥೆ ಭೂಗತ ಚಿಪ್ಪಿನ ಚರಿತ್ರೆಯಲ್ಲಿ ಸಿಕ್ಕಿದೆ. ಗೋಕರ್ಣ ಕ್ಷೇತ್ರ ಮುಳುಗುವ ಆತಂಕದಲ್ಲಿದ್ದಾಗ ಪರಶುರಾಮ ಕೊಡಲಿ ಎತ್ತಿ ಕಡಲನ್ನು ಹಿಂದಕ್ಕೆ ತಳ್ಳಿದ ಪುರಾಣ ಕಥೆಯೂ ಇದೇ ಕಾಲದ್ದು! ಹೀಗಾಗಿ ದಿಕ್ಕು ಬದಲಿಸುವ ಬಡಗಣಿ ಪ್ರಾಗೈತಿಹಾಸಿಕ ಸಂಗತಿಗಳಿಗೂ ದಾರಿ ತೋರಿಸುತ್ತಿದೆ.

## ಪರಿಸರಸ್ನೇಹಿ ಜೀವನ ಮೂಲನೆಲೆಯಲ್ಲೇ ಪರಕೀಯ

25–30 ವರ್ಷಗಳ ಹಿಂದೆ ಸುಮಾರು 175 ಎಕರೆಯ ಬಯಲಿನಲ್ಲಿ ಮಳೆಗಾಲ, ಬೇಸಿಗೆಯೆಲ್ಲ ಭತ್ತದ ಬೆಳೆಯಿತ್ತು. ಬಿಳಿಕಗ್ಗ, ಕರಿಕಗ್ಗ, ಆರ್ಯ ಭತ್ತದ ತಳಿಗಳು ಪರಿಸರಕ್ಕೆ ಹೊಂದಿ ಬೆಳೆದವು. ವರ್ಷಕ್ಕೆ ಭತ್ತದ ಎರಡು ಬೆಳೆ ಮೂರು ಬೆಳೆ ತೆಗೆಯುತ್ತಿದ್ದ ಕಾಲ ಮರೆಯಾಗಿ ಕ್ರಿ.ಶ. 1970ರ ಬಳಿಕ ಬೇಸಿಗೆಯ ಶೇಂಗಾ ಕರಾವಳಿ ಬಯಲಿಗೆ ಬಂತು, ಹೊಸ ಆರ್ಥಿಕ ಬೆಳೆಯಾಯ್ತು. ಹಸಿರು ಕಂಡದಲ್ಲಿ ಜಿಂಕೆಯಂತೆ ಚಂಗನೆ ನೆಗೆಯುವ ಕಗ್ಗ ದನಕರುಗಳ ಉಪಟಳ ಜೋರಾಯ್ತು.